ಕೂಲಿಯಾಳುಗಳು ಬೇಕಾದರೆ ಅವನೇ ಪೇಟೆ ಚೌಕಕ್ಕೆ ಹೋಗಿ ಅಲ್ಲಿ ಬೆಳಗಿನ ಹೊತ್ತು ಕೆಲಸಕ್ಕೆ ಆಹ್ವಾನವನ್ನು ನಿರೀಕ್ಷಿಸುತ್ತಾ ಕಾಯುತ್ತಿರುತ್ತಿದ್ದ ಯೆಲ್ಲಪ್ಪ ಮತ್ತು ಇನ್ನೂ ಯಾರನ್ನಾದರೂ ಒಂದಿಬ್ಬರನ್ನು ಕರೆದುಕೊಂಡು ಬರುತ್ತಿದ್ದ.

ಮುಂದಿನ ವರ್ಷ ಆಗಸ್ಟ್ ತಿಂಗಳಲ್ಲಿ ತೋಟದ ಮರಗಳ ಬುಡ ಬಿಡಿಸಲು ಇದೇ ಸುಸಮಯವಲ್ಲವೆ ಎಂದು ಜಯಂತನೇನಾದರೂ ಕೇಳಿದರೆ ಬಸಪ್ಪ, 'ಈಗ ಯಾರು ಬಿಡಿಸುತ್ತಾರೆ ಸ್ವಾಮೀ? ಅದು ಅಕ್ಟೋಬರ್ ತಿಂಗಳಲ್ಲಿ' ಎನ್ನುತ್ತಿದ್ದ.

'ಅಲ್ಲ, ಕಳೆದ ವರ್ಷ ನೀನೇ ಆಗಸ್ಟ್ ತಿಂಗಳಲ್ಲಿ ಬುಡ ಬಿಡಿಸಿದ್ದಲ್ಲ ಮಾರಾಯ?' ಎಂದು ಜಯಂತ ಕೇಳಿದರೆ ಅವನು ಅದಕ್ಕೆ ತಕ್ಕ ಉತ್ತರವನ್ನು ನೀಡುತ್ತಿದ್ದ.

'ಹಾಗೆ ಕ್ಯಾಲೆಂಡರ್ ನೋಡಿ ಮಾಡುವ ಕೆಲಸ ಅಲ್ಲವಲ್ಲ ದಣಿ, ತೆಂಗಿನಮರದ ಬುಡ ಬಿಡಿಸುವುದು ? ಮಳೆ, ವಾತಾವರಣ ಎಲ್ಲ ನೋಡಿಕೊಂಡು ನಿರ್ಧರಿಸಬೇಕು' ಎನ್ನುತ್ತಿದ್ದ.

'ಅದು ಹೇಗೆ?' ಎಂದು ಜಯಂತ ಕೇಳಿದರೆ ಅವನು, 'ಈ ವರ್ಷ ಮಳೆ ಇನ್ನೂ ನಿಂತಿಲ್ಲವಲ್ಲ ದಣಿ' ಎನ್ನುತ್ತಿದ್ದ. ಕಪ್ಪೆ ಹಿಡಿಯುವ ಬಸಪ್ಪನ ಲೋಕಜ್ಞಾನ ಹೆಚ್ಚಿನದೆಂದು ಜಯಂತ ನಿರ್ಧರಿಸಿದ್ದು ಇಂತಹ ಸಂಗತಿಗಳಿಂದ.

'ತೆಂಗಿನ ಕಾಯಿ ಕೊಯ್ದ ಮೇಲೆ ಆನೆಯನ್ನು ನೋಡಿ ಬರೋಣ ಬಸಪ್ಪ, ಈವತ್ತು ನನ್ನ ಜತೆಗೆ ಬರುತ್ತೀಯಾ?' ಎಂದು ಜಯಂತ ಕೇಳಿದ. ಬಸಪ್ಪ ಒಪ್ಪಿದ.

ಆಮೇಲೆ ಜಯಂತ ತನ್ನ ಬೈಕಿನ ಹಿಂದುಗಡೆ ಬಸಪ್ಪನನ್ನು ಕುಳ್ಳಿರಿಸಿಕೊಂಡು ಮಠದ ಕಡೆಗೆ ಹೋದ. ಅಲ್ಲಿ ವಿಚಾರಿಸಿದಾಗ, ಆನೆಗೆ ಮರಳು ಲಾರಿ ಡಿಕ್ಕಿ ಹೊಡೆದದ್ದು ಇಲ್ಲಿ ಅಲ್ಲ, ಸ್ವಲ್ಪ ದೂರದ ಕಡೆಯಾರ ಎಂಬಲ್ಲಿನ ದೇವಸ್ಥಾನದ ಜಾತ್ರೆಗೆ ಹೋಗಿದ್ದಲ್ಲಿ ಎಂದು ತಿಳಿಯಿತು. ಆನೆಯನ್ನು ಸಮೀಪದ ನದಿಗೆ ಸ್ನಾನ ಮಾಡಿಸಲು ಕರೆದುಕೊಂಡು ಹೋಗುವಾಗ, ಆನೆ ಹೆಜ್ಜೆಹಾಕುತ್ತಿದ್ದ ನದಿಗೆ ಹೋಗುವ ಒದ್ದೆಯಾದ ತಿರುವಿನಿಂದ ಕೂಡಿದ ಮಣ್ಣಿನ ರಸ್ತೆಯಲ್ಲಿ ಹಿಂದಿನಿಂದ ಬಂದ ಕಳ್ಳಸಾಗಾಟದ ಮರಳಿನ ಟೆಂಪೋದ ಡ್ರೈವರ್ ಪಕ್ಕನೆ ಆನೆಯನ್ನು ಕಂಡು ಬ್ರೇಕ್ ಒತ್ತಿದಾಗ ಗಾಡಿ ಹತೋಟಿಗೆ ಬರದೆ ಜಾರಿಕೊಂಡು ಬಂದು ಆನೆಗೆ ಗುದ್ದಿತಂತೆ. ಆನೆಗೆ ಗಾಯವಾಗಿ ಬೆಚ್ಚಿ ನೆಗೆದು ಅಡ್ಡ ಬಿದ್ದಿತಂತೆ. ಈಗ ಚಿಕಿತ್ಸೆ ನಡೆಯುತ್ತಿದೆಯಂತೆ.

ಮರಳು ಕಳ್ಳ ಸಾಗಾಟದವರು ನದೀದಂಡೆಯಲ್ಲಿ ತಾವು ರಾಶಿ ಮಾಡಿ ಇಟ್ಟ ಮರಳು ಪಕ್ಕನೆ ಹೊರಗಿನವರಿಗೆ ಕಾಣದಂತೆ ಬೇಕೆಂದೇ ತಿರುವಾದ, ಗಿಡಗಂಟಿಗಳಿಂದ ಮರೆಯಾದ ಮಣ್ಣಿನ ರಸ್ತೆಯನ್ನು ನದೀ ತೀರದವರೆಗೆ ಮಾಡಿದ್ದರು. ಆನೆ ಅದರಲ್ಲಿ ಹೋಗುತ್ತಿದ್ದುದನ್ನು ಅರಿಯದ ಡ್ರೈವರ್ ತನಗೆ ಸಲೀಸಾಗಿದ್ದ ತಿರುವಿನಲ್ಲಿ ರೊಯ್ಯನೆ ತಿರುಗಿಸಿ ಆನೆಯನ್ನು ಕಂಡು ಗಾಬರಿಯಾಗಿ ಹೀಗೆ ಗುದ್ದಿದ್ದ.

ಈ ವಿವರಗಳನ್ನು ಮಠದ ಹುಡುಗರಿಂದ ಕೇಳಿ ತಿಳಿದ ಜಯಂತ, ಆನೆಯನ್ನು ನೋಡಲಾಗದ ಬೇಸರದಿಂದಲೂ, ಅದಕ್ಕಾದ ಅಪಘಾತದಿಂದ ಕಳವಳದಿಂದಲೂ ಬಸಪ್ಪನ ಜತೆಗೆ ಹಿಂದಿರುಗಿದ. ದಾರಿಯಲ್ಲಿ ಪೋಸ್ಟ್‌ಮ್ಯಾನ್ ಎದುರು ಸಿಕ್ಕಿ, ಸನ್ನೆ ಮಾಡಿ ನಿಲ್ಲಿಸಿದ.

'ನಿಮಗೊಂದು ರಿಜಿಸ್ಟರ್ ಪೋಸ್ಟ್ ಇತ್ತು ಜಯಂತಣ್ಣ. ಮನೆಗೆ ಬೀಗ ಹಾಕಿತ್ತು. ಈಗ ನೀವು ಸಿಕ್ಕಿದ್ದು ಒಳ್ಳೆಯದಾಯಿತು' ಎಂದು ರಿಜಿಸ್ಟರ್ ಪೋಸ್ಟನ್ನು ಅವನಿಗೆ ಡೆಲಿವರಿ ಮಾಡಿ ಮುಂದೆ ಹೋದ. ಅದೊಂದು ಲಾಯರ್ ನೋಟೀಸು ಎಂದು ಗಮನಿಸಿದ ಜಯಂತ ಅದನ್ನು ಅಲ್ಲಿಯೇ ತೆರೆದು ನೋಡಿದ. ಅದರ ವಿಷಯವನ್ನು ಗಮನಿಸಿ, ಆಘಾತಗೊಂಡು ಮತ್ತೂ ಮತ್ತೂ ಓದುತ್ತಿದ್ದಂತೆ ಕಣ್ಣು ಮಂಜಾಯಿತು. ಪಕ್ಕದಲ್ಲಿದ್ದ ಮರದ ಬೊಡ್ಡೆಯ ಮೇಲೆ ಕುಳಿತ.

'ಏನು ದಣಿ, ಗಾಬರಿಯಾಗಿಬಿಟ್ರಲ್ಲ? ಏನಿದೆ ಕಾಗದದಲ್ಲಿ?' ಎಂದು ಬಸಪ್ಪ ಕೇಳಿದ.

'ಬೆಳಿಗ್ಗೆ ನೀನು ಆನೆಯ ಸುದ್ದಿ ಹೇಳಿದಾಗಲೇ ನನಗೆ ಇವತ್ತು ಏನೋ ಆಗಬಾರದ್ದು ಆಗುತ್ತದೆ ಎಂದು ಭಯವಾಗಿತ್ತು ಬಸಪ್ಪ. ರತ್ನಾವತಿ ಡೈವರ್ಸ್ ನೋಟೀಸ್ ಕಳಿಸಿದ್ದಾಳೆ!' ಎಂದು ಹೇಳಿದ ಜಯಂತ ಕಣ್ಣುಮುಚ್ಚಿ ತಲೆಗೆ ಕೈಯಿಟ್ಟುಕೊಂಡು ಕೈಕಾಲು ಚೆಲ್ಲಿ ಕುಸಿದ. ನೀರು ಬೇಕೆಂದು ಕೈಸನ್ನೆ ಮಾಡಿದ. ಬಸಪ್ಪ ನೀರು ತರಲು ಪಕ್ಕದಲ್ಲಿದ್ದ ಮನೆಯತ್ತ ಓಡಿದ.

●